ಸಿಸಿ ಸಂಖ್ಯೆ.**03/2021** ಡಿ.ಡಬ್ಲ್ಯೂ- **3**

ಸಾಕ್ಷಿಯು ದಿನಾಂಕ **02.04.2026** ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ನೀಡಲಾಯಿತು.

ಆರೋಪಿಯ ಪರ ವಿಚಾರಣೆಃ ಶ್ರೀ **DRM** ನ್ಯಾಯಾವಾದಿಗಳಿಂದ

| | |
|---|---|
| ಹೆಸರು | ಈಶ್ವರಯ್ಯ |
| ತಂದೆಯ ಹೆಸರು | ಗುರುಲಿಂಗಯ್ಯ |
| ವಯಸ್ಸು | 55 ವರ್ಷ |
| ವೃತ್ತಿ | ವೆಂಲ್ಡಿಂಗ್ ಕೆಲಸ |
| ವಿಳಾಸ | ಬೆಂಗಳೂರು |

ಆರೋಪಿಯು ಶ್ರೀನಿವಾಸರವರು ನಡೆಸುತ್ತಿದ್ದ ಚೀಟಿ ವ್ಯವಹಾಕ್ಕೆ ನನ್ನನ್ನು ಸದಸ್ಯರಾಗಿ ಸೇರಿಸಿದ್ದರು. ಸದರಿ ಚೀಟಿಯು ಒಂದು ಲಕ್ಷದ ಚೀಟಿಯಾಗಿದ್ದು, ಪ್ರತಿ ತಿಂಗಳು **5** ಸಾವಿರ ರೂ.ಗಳ ಕಂತನ್ನು ಕಟ್ಟಬೇಕಾಗಿತ್ತು. ಒಟ್ಟು **20** ಜನ ಸದಸ್ಯರು ಇದ್ದರು. ನಾನು **10** ನೇ ಚೀಟಿಯನ್ನು ತೆಗೆದುಕೊಂಡಿರುತ್ತೇನೆ. ಆ ಸಮಯದಲ್ಲಿ ಜಾಮೀನಿಗೆಂದು ನನ್ನ ಒಂದು ಚೆಕ್ ಅನ್ನು ಸದರಿ ಶ್ರೀನಿವಾಸರವರಿಗೆ ಕೊಟ್ಟಿದ್ದೆ. ಯಾರು ಚೀಟಿ ಎತ್ತಿಕೊಳ್ಳುತ್ತಿದ್ದರೋ ಅವರಿಂದ ಸದರಿ ಶ್ರೀನಿವಾಸರವರು ಭದ್ರತೆಗೆಂದು ಚೆಕ್ ಅನ್ನು ಪಡೆಯುತ್ತಿದ್ದರು.

**2.** ಆರೋಪಿಯು **12** ನೇ ಕಂತನ್ನು ಎತ್ತಿರುತ್ತಾರೆ. ಸದರಿ ಆರೋಪಿಯು ಸಹ ಆ ಸಮಯದಲ್ಲಿ ಸಹಿ ಮಾಡಿ ಖಾಲಿ ಚೆಕ್ ಅನ್ನು ಶ್ರೀನಿವಾಸರವರಿಗೆ ನೀಡಿದ್ದರು. ಚೀಟಿ ವ್ಯವಹಾರ ಮುಗಿದ ಮೇಲೆ ನಾನು ನನ್ನ ಚೆಕ್ ಅನ್ನು ವಾಪಸ್ಸು ಪಡೆದುಕೊಂಡಿರುತ್ತೇನೆ. ಚೀಟಿ ವ್ಯವಹಾರವನ್ನು ಮತ್ತೆ ಮುಂದುವರೆಸುವುದಾಗಿ ಹೇಳಿ, ಸದರಿ ಶ್ರೀನಿವಾಸರವರು ಆರೋಪಿಯ ಚೆಕ್ ಅನ್ನು ವಾಪಸ್ಸು ಮಾಡದೇ ತಮ್ಮ ಬಳಿಯೇ ಇಟ್ಟುಕೊಂಡಿದ್ದರು.

**3.** ಪಿರ್ಯಯಾದಿ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರವು ನಡೆದಿರುವುದಿಲ್ಲ**,** ಆರೋಪಿಯು ಚೀಟಿ ವ್ಯವಹಾರದ ಭದ್ರತೆಗಾಗಿ ನೀಡಿದ್ದ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಪಿರ್ಯಾದಿಯ ಮುಖಾಂತರ ಈ ಸುಳ್ಳು ಚೆಕ್ ಪ್ರಕರಣವನ್ನು ಆರೋಪಿಯ ವಿರುದ್ದ ಸಲ್ಲಿಸಲಾಗಿರುತ್ತದೆ ಎಂದು ಆರೋಪಿಯು ನನಗೆ ಹೇಳಿರುತ್ತಾರೆ**.**

ಪಾಟಿಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು**.**

ಸಾ. ಹೇ. ಬ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

1 ನೇ ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ.